ದಿನಾಂಕ:20.11.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು:ಎದುರುದಾರರ ಪರವಾಗಿ ಶ್ರೀ ಬಿ.ಆರ್.ಎಂ. ವಕೀಲರಿಂದ:**

ನಾನು 02.06.1995 ರಂದು ಜನಿಸಿರುತ್ತೇನೆ. ನನ್ನ ಆಧಾರ ಕಾರ್ಡಿನ ಸಂಖ್ಯೆ:722300986533 ಎಂದರೆ ಸರಿ. ನಾನು ದ್ವಿತೀಯ ಬಿ.ಎ. ವರೆಗು ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಕಾಮ್ಕೋ ಲಿಮಿಟೆಡ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕಂಪನಿಯಲ್ಲಿ ಕೆಲಸ ಮಾಡುವವರಿಗೆ ಪಿ.ಎಫ್. ಮತ್ತು ಇಎಸ್ಐ ನ ಸೌಲಭ್ಯ ಇರುವ ಬಗ್ಗೆ ನನಗೆ ತಿಳಿದಿರುವುದಿಲ್ಲ, ಸಾಕ್ಷಿಯು ಮುಂದುವರಿದು ನಾನು ಕೆಲಸಕ್ಕೆ ಹೋಗುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಕಂಪನಿಯಲ್ಲಿ ಕೆಲಸ ಮಾಡುವವರ ಸಂಬಳ ಕರ್ನಾಟಕ ಬ್ಯಾಂಕಿಗೆ ಪಾವತಿಯಾಗುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಕಡೂರಿನ ಯ.ಬಿ. ರಸ್ತೆಯ ಕೆನರಾ ಬ್ಯಾಂಕಿನಲ್ಲಿ ನನ್ನ ಖಾತೆ ಇದೆ ಎಂದರೆ ಸರಿ. ನನ್ನ ಖಾತೆ ಸಂಖ್ಯೆ ತಿಳಿದಿರುವುದಿಲ್ಲ, ಅದರಲ್ಲಿ ಲಕ್ಷಾಂತರ ರೂಪಾಯಿಗಳು ಇರುತ್ತದೆ ಎಂದರೆ ಸರಿಯಲ್ಲ. ಈಗ ಸದರಿ ಖಾತೆಯಲ್ಲಿ ಎಷ್ಟು ಹಣ ಇದೆ ಎಂದು ನೆನಪಿರುವುದಿಲ್ಲ.

2017 ರಲ್ಲಿ ಎದುರುದಾರರು ಮತ್ತು ಆತನ ಕುಟುಂಬದವರು ಅಸಲು ದಾವಾ ಸಂಖ್ಯೆ.50/2017 ರಂತೆ ವಿಭಾಗದ ರಾಜಿ ಡಿಕ್ರಿ ಮಾಡಿಕೊಂಡ ಬಗ್ಗೆ ನನಗೆ ತಿಳಿದಿರುವುದಿಲ್ಲ. ಬಾಣಾವರ ಹೋಬಳಿ, ಉಪ್ಪಿನಹಳ್ಳಿ ಗ್ರಾಮದ ಸರ್ವೆನಂಬರ್ 36/3 ರಲ್ಲಿ 1 ಎಕರೆ 27 ಗುಂಟೆ, ಸರ್ವೆನಂಬರ್ 45 ರಲ್ಲಿ 9 ಗುಂಟೆ ಹಾಗೂ ಬಾಣಾವರದಲ್ಲಿ ಒಂದು ವಾಸದ ಮನೆ 1018/955A ಎದುರುದಾರನ ಹಿಸ್ಸೆಗೆ ಬಂದಿರುವ ಬಗ್ಗೆ ನನಗೆ ತಿಳಿದಿರುದಿಲ್ಲ. ಬ್ಯಾಂಕಿನ ಸಾಲವನ್ನು ಎದುರುದಾರ ಮತ್ತು ಆತನ ಅಣ್ಣ ತೀರಿಸಬೇಕು ಎಂದು ರಾಜಿಯಲ್ಲಿ ಬರೆಯಲಾಗಿದೆ ಎಂಬುದರ ಬಗ್ಗೆ ನನಗೆ ತಿಳಿದಿರುವುದಿಲ್ಲ. ನನ್ನ ತಂದೆಯ ಹೆಸರು ತಿಮ್ಮಣ್ಣ. ನನ್ನ ತಾತನ ಹೆಸರು ಮಲೆಯಪ್ಪ. ನಾನು ವೆಂಕಟೇಶ್ವರ ನಗರದಲ್ಲಿ ವಾಸವಾಗಿದ್ದು ಸದರಿ ಮನೆಯ ಸರ್ವೆನಂಬರ್ ನನಗೆ ತಿಳಿದಿರುವುದಿಲ್ಲ. ಸಾಕ್ಷಿಯು ಮುಂದುವರಿದು ನಾನು ಬಾಡಿಗೆ ಮನೆಯಲ್ಲಿ ವಾಸ ಇದ್ದೇನೆ ಎಂದು ನುಡಿಯುತ್ತಾರೆ.

ಕಡೂರು ತಾಲ್ಲೂಕು, ಕಸಬ ಹೋಬಳಿ, ಅರುವನಹಳ್ಳಿ ಗ್ರಾಮದ ಸರ್ವೆನಂಬರ್ 73/1 ರಲ್ಲಿ ನನ್ನ ತಂದೆಗೆ ವಿಭಾಗದ ಮುಖಾಂತರ 7 ½ ಗುಂಟೆ ಬಂದಿದೆ ಎಂದರೆ ಸರಿಯಲ್ಲ. ಗೋವಿಂದಪ್ಪ ನನ್ನ ದೊಡ್ಡಪ್ಪ ಹಾಗೂ ಚಂದ್ರಪ್ಪ ನನ್ನ ಚಿಕ್ಕಪ್ಪ. ಸರ್ವೆನಂಬರ್ 73/1 ರ ಕಾಲಂ ನಂ.9 ರಲ್ಲಿ ನನ್ನ ತಂದೆಗೆ 7 ½ ಗುಂಟೆ ಬಂದ ಸ್ವತ್ತು ಭೂ ಪರಿವರ್ತನೆಯಾಗಿದೆ ಎಂದರೆ ಸರಿಯಲ್ಲ. ಸದರಿ 7 ½ ಗುಂಟೆಗೆ ಕಡೂರಿನ ಪುರಸಭೆಯಲ್ಲಿ ಖಾತೆಯಾಗಿದೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ಎರಡು ಮನೆ ಇದೆ ಎಂದರೆ ಸರಿ. ನನ್ನ ತಂದೆ ಇದ್ದಾಗ ಒಂದು ಮನೆ ಇತ್ತು. ಈಗ ಇನ್ನೊಂದು ಮನೆಯನ್ನು ನಿರ್ಮಿಸಿದ್ದೇವೆ ಹಾಗೂ ಅದನ್ನು ಬಾಡಿಗೆಗೆ ನೀಡಿದ್ದೇವೆ. ಸದರಿ ಮನೆಯನ್ನು ರೂ.10,000/-ಕ್ಕೆ ಬಾಡಿಗೆ ನೀಡಿದ್ದೇವೆ ಎಂದರೆ ಸರಿಯಲ್ಲ,

ಸಾಕ್ಷಿ ಮುಂದುವರಿದು ಶೀಟಿನ ಮನೆಗೆ ಕೇವಲ ರೂ.3,000/- ಬಾಡಿಗೆ ನೀಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಜಾಗ ಇರುವ ಸ್ಥಳವನ್ನು ವೆಂಕಟೇಶ್ವರ ನಗರ ಎಂದು ಕರೆಯುತ್ತಾರೆ ಎಂದರೆ ಸರಿ. ಅಲ್ಲಿ ಚದುರ ಅಡಿ ಎಷ್ಟು ಬೆಲೆ ಇದೆ ಎಂದು ನನಗೆ ತಿಳಿದಿರುವುದಿಲ್ಲ. ಮತ್ತೊಂದು ನಿವೇಶವನ್ನು ನಾವು ಕಾರುಗಳನ್ನು ನಿಲ್ಲಿಸಲು ಬಾಡಿಗೆಗೆ ನೀಡಿದ್ದೇವೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಮುಂದೂಡಲಾಯಿತು.**

**(**ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸ ಇ ಎ ಒ

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,
ಕಡೂರು.